**O.S.No.351/2018**
**D.W-1**

**<u>ಸಾಕ್ಷಿಯನ್ನು ದಿನಾಂಕಃ18.09.2025ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ ವಾದಿ ಪರ ಶ್ರೀ. ಹೆಚ್ ಎಸ್ ಪಿ ವಕೀಲರಿಂದ:</u>**

ನಾನು 10ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಭಾಷೆ ಓದಲು ಬರೆಯಲು ಬರುತ್ತದೆ. ವಾದಿ ಈ ದಾವೇಯನ್ನು ಏನು ಪರಿಹಾರ ಕೋರಿ ಸಲ್ಲಿಸಿದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ. ವಾದಿ ಈ ದಾವೇಯನ್ನು ಯಾವ ಆಸ್ತಿಗಾಗಿ ಹೂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ವಾದಿ ಈ ದಾವೇಯನ್ನು ಪಿತ್ರಾರ್ಜಿತ ಆಸ್ತಿಗಾಗಿ ಹೂಡಿರುತ್ತಾರೆ ಎಂದು ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ವಾದಿಯ ಕುಟುಂಬದ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ. ವಾದಿಯ ಗಂಡ ಯಾರು ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿ ಮೂಲತಃ ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ನಾನು ಸಲ್ಲಿಸಿರುವ ತಕರಾರಿನ ವಿಚಾರ ಸರಿಯಾಗಿ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತು. ಸದರಿ ವಿಚಾರಗಳನ್ನು ನಮ್ಮ ವಕೀಲರಿಗೆ ನಾನೇ ಹೇಳಿ ಬರೆಸಿರುತ್ತೇನೆ.

2. ದಾವಾ ಆಸ್ತಿ ಮೂಲತಃ ಕಪನಯ್ಯನವರಿಗೆ ಸೇರಿದ್ದು ಎಂದು ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಕಪನಯ್ಯನವರಿಗೆ ಹೊನ್ನಯ್ಯ ಮತ್ತು ನಂಜುಂಡಯ್ಯ ಎಂದು ಇಬ್ಬರು ಮಕ್ಕಳಿದ್ದಾರೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಸದರಿ ಇಬ್ಬರು ಮಕ್ಕಳು ದಿನಾಂಕ 09.02.1952 ರಲ್ಲಿ ವಿಭಾಗ ಮಾಡಿಕೊಂಡರು ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ನಂಜುಂಡಯ್ಯನಿಗೆ 4 ಜನ ಮಕ್ಕಳಿದ್ದು, ಅವರ ಪೈಕಿ ಶಿವನಂಜಯ್ಯ ವಾದಿಯ ಗಂಡನಾಗಿರುತ್ತಾರೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ನಂಜುಂಡಯ್ಯನ ಜನ ಮಕ್ಕಳು 1984ರಲ್ಲಿ ಮೌಖಿಕವಾಗಿ ವಿಭಾಗ ಮಾಡಿಕೊಂಡಾಗ, ದಾವಾ ಆಸ್ತಿ ವಾದಿಯ ಗಂಡನ ಪಾಲಿಗೆ ಬಂದಿತ್ತು ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಆ ರೀತಿ

ವಿಭಾಗವಾದ ದಿನದಿಂದ ವಾದಿಯ ಗಂಡ ಬದುಕಿದ್ದಾಗ ಮತ್ತು ಅವರ ಮರಣದ ನಂತರ ಆತನ ಹೆಂಡತಿ ಮಕ್ಕಳು ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ದಾವಾ ಆಸ್ತಿಯ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ವಾದಿ ಈ ದಾವೇಯನ್ನು ನನ್ನ ತಂದೆ ಮತ್ತು ನನ್ನ ಮೇಲೆ ಹಾಗೂ ನನ್ನ ಸಹೋದರರ ವಿರುದ್ದ ಹೂಡಿರುತ್ತಾರೆ.

3. ವಾದಿಗಳ ಕುಟುಂಬಕ್ಕೂ ನಮ್ಮ ಕುಟುಂಬಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ವಾದಿ ಈ ದಾವೇಯನ್ನು 2018ರಲ್ಲಿ ಹೂಡಿರುತ್ತಾರೆ. ವಾದಿಯು ಯಾವ ಕಾರಣಕ್ಕಾಗಿ ಹೂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ವಾದಿ ಈ ದಾವೇಯನ್ನು ನಾವು ದಾವಾ ಆಸ್ತಿಯಲ್ಲಿ ಅಡಿಪಾಯ ಹಾಕಲು ಪ್ರಯತ್ನಪಟ್ಟಾಗ ಹೂಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು, ನಾವು ಗ್ರಾಮ ಠಾಣಾದಲ್ಲಿ ಕಟ್ಟುತ್ತಿದ್ದೆವು ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.**

*( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)*

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .
ಕುಣಿಗಲ್.